



# ಢೋಲಿ ತಾರೊ... ಢೋಲ್ ಬಾಜೆ...

ಸೃಷ್ಟಿ–ಲಯಗಳನ್ನು ಸಂಭ್ರಮಿಸುವುದೇ ದಾಂಡಿಯಾ ಮತ್ತು ಗಾರ್ಭಾ. ಚಾಮುಂಡಾ ದೇವಿ ಮಹಿಷಾಸುರರಂತೆ ದಾಂಡಿಯಾದಲ್ಲಿ ಹೆಜ್ಜೆ ಹಾಕುತ್ತಾರೆ. ಗಾರ್ಭಾ ಜನನ ಮರಣದ ಸಂಕೇತವೇ ಆಗಿದೆ.

■ ರಶ್ಮಿ ಎಸ್.
ಚಿತ್ರಗಳು: ತಾಜುದ್ದೀನ್ ಆಜಾದ್

ಟಕ್... ಟಕ್.. ಘಲ್ ಘಲ್... ಸದ್ದು ಲಯಬದ್ಧವಾಗಿ ಕೇಳತೊಡಗಿದರೆ ನವರಾತ್ರಿಯ ಸಂಜೆಗಳು ರಂಗೇರಿದಂತೆ. ದೂರದಿಂದಲೇ ಢೋಲಿ ತಾರೊ ಢೋಲ್ ಬಾಜೆ, ನಗಾರಾ.. ನಗಾರಾ ಬಜಾ ಮುಂತಾದ ಬಾಲಿವುಡ್ ಹಾಡುಗಳು ಕೇಳುತ್ತಿದ್ದರೆ ಅವನ್ನು ಮೀರಿಯೇ ಕೋಲಾಟಗಳ ಖಣಖಣ ಸದ್ದು ಕೇಳಿಬರುತ್ತದೆ.

ಕರ್ನಾಟಕದಲ್ಲಿ 18ನೇ ಶತಮಾನದಿಂದೀಚೆಗೆ ಗುಜರಾತಿ ಸಮಾಜದವರು ನೆಲೆಕಾಣಲು ಆರಂಭಿಸಿದರು. ಅವರು ನೆಲೆ ನಿಂತಲ್ಲೆಲ್ಲ ನವರಾತ್ರಿಯ ಇಳಿ ಸಂಜೆಗಳು ಸಾಂಸ್ಕೃತಿಕ ಸಂಜೆಗಳಾಗಿ ಬದಲಾದವು. ಈಗೀಗ ಬಾಲಿವುಡ್ ಸಂಗೀತ ಮತ್ತು ಡೀಜೆಗಳ ಅಬ್ಬರ ಹೆಚ್ಚಿದೆ. ಹಿಂದೆ ಗುಜರಾತಿ ಜನಪದೀಯ ಹಾಡುಗಳಿಗೆ ಹೆಜ್ಜೆ ಹಾಕುತ್ತಿದ್ದರು.

